ದಿನಾಂಕಃ **05.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಗಳ ಪರ ವಕೀಲರಿಂದಃ

01. ವಾದಿ ನನಗೆ ಹೇಗೆ ಪರಿಚಯ? ಎಂದರೆ ನಮ್ಮ ಊರಿನಲ್ಲಿ ಅವರು ಪ್ರೈಮರಿ ಸ್ಕೂಲ್ ಟೀಚರ್ ಆಗಿದ್ದರಿಂದ ಪರಿಚಯ. ವಾದಿಯ ಪರಿಚಯವಾದ ನಂತರ ನಾನು ಅವರನ್ನು ಮಾತನಾಡಿಸುತ್ತಿದೆ. ನಾನು ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಮುಂಚೆ ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇತ್ತು. ನಾನು ಬಿ.ಎ. ಮುಗಿಸಿ ಒಂದು ವರ್ಷ ಎಲ್.ಎಲ್.ಬಿ. ಮಾಡಿ ನಂತರ ನಿಲ್ಲಿಸಿದೆ. ನನ್ನ ಪ್ರಮಾಣ ಪತ್ರವನ್ನು ಯಾರು ತಯಾರಿಸಿದರು? ಎಂದರೆ ಸಾಕ್ಷಿಯು ಅವರ ವಕೀಲರ ಹೆಸರು ಹೇಳಿದ್ದು, ಅವರ ಪರ ವಕೀಲರು ಪ್ರಶ್ನೆ ಸರಿಯಾಗಿ ಅರ್ಥ ಮಾಡಿಕೊಂಡು ಉತ್ತರಿಸು ಎಂದ ನಂತರ ಸಾಕ್ಷಿಯು ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿದ್ದೇನೆ ಎಂದು ಹೇಳಿದ್ದಾರೆ . ನಾನು ಎ.ಪಿ.ಎಂ.ಸಿ. ಚುನಾವಣೆಗೆ ನನಗೆ 1 ಲಕ್ಷ ರೂಪಾಯಿ ಬೇಕಾಗಿತ್ತು ಎಂದು ಬರೆಯಿಸಿದ್ದು, ಎ.ಪಿ.ಎಂ.ಸಿ. ಚುನಾವಣೆ ಯಾವಾಗ ಇತ್ತು? ಎಂದರೆ ಜನವರಿ 2017 ರಲ್ಲಿ ಇತ್ತು. ಯಾವ ದಿನಾಂಕದಂದು ಇತ್ತು? ಎಂದರೆ 12 ಅಥವಾ 13 ನೇ ತಾರೀಖಿನಂದು ಇತ್ತು. ಆ ದಿನ ಯಾವ ವಾರವಾಗಿತ್ತು? ಎಂದರೆ ನೆನಪಿಲ್ಲ. ಚುನಾವಣೆಗೆ ಡಿಪಾಸಿಟ್ ಇಟ್ಟಿದ್ದ ರಸೀದಿಯನ್ನು ಕೋರ್ಟಿಗೆ ಹಾಜರು ಮಾಡಿದ್ದೀರಾ? ಎಂದರೆ ಮಾಡಿಲ್ಲ. ಚುನಾವಣೆಗೆ ನಿಂತಿದ್ದ ಬಗ್ಗೆ ಯಾವುದಾದರೂ ದಾಖಲೆ ಹಾಜರು ಮಾಡಿದ್ದೀರಾ? ಎಂದರೆ ಮಾಡಿಲ್ಲ. ಚುನಾವಣೆಯ ಖರ್ಚಿಗಾಗಿ ರೂ. 1 ಲಕ್ಷ ಅಗತ್ಯವಿತ್ತು ಎಂದು ತೋರಿಸುವ ದಾಖಲೆಗಳನ್ನು ಹಾಜರು ಮಾಡಿದ್ದೀರಾ? ಎಂದರೆ ಮಾಡಿಲ್ಲ. ನಾನು ಆ ಸಮಯದಲ್ಲಿ ವಾದಿಯನ್ನು ಎಲ್ಲಿ ಭೇಟಿ ಮಾಡಿದ್ದೆ? ಎಂದರೆ ಅವರ ಮನೆಯಲ್ಲಿ ಭೇಟಿ ಮಾಡಿದ್ದೆ. ಆ ಸಮಯದಲ್ಲಿ ನಾನು ಮತ್ತು ಇನ್ನೂ 4 ಜನ ಸಾಕ್ಷಿಗಳು ವಾದಿಯ ಮನೆಗೆ ಹೋಗಿದ್ದೆವು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸಾಕ್ಷಿಗಳ ಜೊತೆ ಹೋದ ಬಗ್ಗೆ ತಿಳಿಸದೇ ನಾನು ರೂ. **1** ಲಕ್ಷ ಸಾಲಕ್ಕಾಗಿ ವಾದಿಯನ್ನು ಸಂಪರ್ಕಿಸಿದೆನು ಎಂದು ಬರೆದಿದ್ದು, ಈಗ ಇನ್ನೂ 4 ಜನ ಸಾಕ್ಷಿಗಳ ಜೊತೆ ಸಾಲ ಕೇಳಲು ಹೋಗಿದ್ದೆ ಎಂದು ಪಾಟೀಸವಾಲಿನಲ್ಲಿ ಹೇಳುತ್ತಿದ್ದು, ಈ ಎರಡೂ ಹೇಳಿಕೆಗಳಲ್ಲಿ ಯಾವುದು ನಿಜ ಎಂದರೆ 4 ಜನ ಸಾಕ್ಷಿಗಳ ಜೊತೆ ಸಾಲ ಕೇಳಲು ಹೋಗಿದ್ದೆ ಎನ್ನುವುದು ನಿಜವಿರುತ್ತದೆ. ಪ್ರಮಾಣ ಪತ್ರದಲ್ಲಿ ನಾನೊಬ್ಬನೇ ಹೋಗಿದ್ದೆ ಎಂಬುದನ್ನು ಯಾರು ಬರೆಯಿಸಿದರು? ಎಂದರೆ ನಾನೇ ಬರೆಯಿಸಿದ್ದೆ. ಕ್ರಯದ ಕರಾರು ಪತ್ರದ ವ್ಯವಹಾರದ ಬಗ್ಗೆ ಬಹಿರಂಗ ಪಡಿಸದೇ ರೂ. 6 ಲಕ್ಷ ಕ್ರಯದ ಮೌಲ್ಯ ತೋರಿಸಿ ರೂ 5 ಲಕ್ಷ ಮುಂಗಡವಾಗಿ ಕೊಟ್ಟಂತೆ ವಾದಿಯು ಬರವಣಿಗೆ ಮಾಡಿಸಿದ್ದಾರೆ ಎಂದಿದ್ದು, ನನ್ನ ಜೊತೆ ಬಂದಿದ್ದ 4 ಜನ ಸಾಕ್ಷಿಗಳೂ ಕೂಡಾ ಕ್ರಯದ ಕರಾರನ್ನು ಓದಲಿಲ್ಲವೇ? ಎಂದರೆ ಸಾಕ್ಷಿಗಳಲ್ಲಿ ನಿಂಗಪ್ಪ ಅವಿದ್ಯಾವಂತನಾಗಿದ್ದು, ಇನ್ನೂ ಇಬ್ಬರು ಸಾಕ್ಷಿಗಳಾದ ಬಸವರಾಜ, ಎಂ.

ಶಂಕರಪ್ಪ ಮತ್ತು ಕುರಿ ಮಲ್ಲಪ್ಪ ನನಗೆ ನಾವು ಇದ್ದೇವೆ, ಏನೂ ಆಗುವುದಿಲ್ಲ ಎಂದು ಹೇಳಿದ್ದರಿಂದ ಸಹಿ ಮಾಡಿದ್ದೆ. ನಾನು ರೂ. 5 ಲಕ್ಷ ಮುಂಗಡ ಹಣ ಪಡೆದು ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಯೇ ಕ್ರಯದ ಕರಾರು ಬರೆದುಕೊಟ್ಟು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನನಗೆ ವಾದಿ ಮಾಡಿದ ಕೃತ್ಯ ಯಾವಾಗ ಬಹಿರಂಗವಾಯಿತು? ಎಂದರೆ ನೋಟೀಸ್ ಬಂದ ನಂತರ ಆಯಿತು. ಪ್ರತಿವಾದ ಪತ್ರದಲ್ಲಿ ವಾದಿಯ ನೋಟೀಸ್ ಬರುವವರೆಗೆ ಆ ವಿಚಾರ ನನಗೆ ಬಹಿರಂಗವಾಗಿಲ್ಲಿಲ್ಲ ಎಂಬುದನ್ನು ಬರೆಯಿಸಿದ್ದೇನೆಯೇ? ಎಂದರೆ ಬರೆಯಿಸಿದ್ದೇನೆ. ನನ್ನ ರಿಪ್ಲೇ ನೋಟೀಸ್ ಮತ್ತು ಪ್ರತಿವಾದ ಪತ್ರದಲ್ಲಿ ಸದರಿ ವಿಚಾರವನ್ನು ಬರೆಯಿಸಿಲ್ಲ ಎಂದರೆ ಸರಿಯಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಕ್ರಯದ ಕರಾರಿನಲ್ಲಿ ಬರೆದಿರುವ ಸಂಗತಿಗಳನ್ನು ನನಗೆ ಓದಲು ಅವಕಾಶ ಕೊಡದೇ ಸಹಿ ಮಾಡುವಂತೆ ಕೇಳಿದಾಗ ನನಗೆ ಅನುಮಾನ ಬರಲಿಲ್ಲವೇ? ಎಂದರೆ ಅನುಮಾನ ಬಂದಿತ್ತು. ನಾನು ವಾದಿಯನ್ನು ಕರಾರು ಪತ್ರದಲ್ಲಿ ಏನು ಬರೆದಿದೆ ಎಂದು ಕೇಳಲಿಲ್ಲವೇ? ಎಂದರೆ ಕೇಳಿದಾಗ ವಾದಿಯು ಶೇಕಡಾ 6 ರಂತೆ ಬಡ್ಡಿ ಹಣ ಕೊಟ್ಟರೆ ನಿನ್ನ ಜಮೀನು ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು. ವಾದಿಯನ್ನು ನಾನು ಪಡೆಯುತ್ತಿರುವ ಸಾಲಕ್ಕೆ ಪ್ರಾಮಿಸರಿ ಪತ್ರ ಬರೆಯಿಸಿಕೊಳ್ಳುವಂತೆ ಕೇಳಲಿಲ್ಲವೇ? ಎಂದರೆ ವಾದಿಯು ಪ್ರಾಮಿಸರಿ ಪತ್ರಕ್ಕೆ ಒಪ್ಪಲಿಲ್ಲ ನೋಂದಾಯಿತ ಅಡಮಾನ ಪತ್ರ ಬರೆಯಿಸಿಕೊಳ್ಳುವಂತೆ ನಾನು ವಾದಿಯನ್ನು ಕೇಳಲಿಲ್ಲವೇ? ಎಂದರೆ ಇಲ್ಲ. ಕುರಿ ಮಲ್ಲಪ್ಪನ ಊರು ಮಾಗಳ. ಎಂ. ಶಂಕರಪ್ಪನ ಊರು ಹಾವೇರಿ ಜಿಲ್ಲೆಯ ಬೆಳವಿಗಿ. ಎಂ. ಶಂಕರಪ್ಪ ನನಗೆ ಸಂಬಂಧಿಕನಲ್ಲ. ಕುರಿ ಮಲ್ಲಪ್ಪ ಪರಿಚಯಸ್ಥ. ಎಂ. ಶಂಕರಪ್ಪ ನನಗೆ ಹೇಗೆ ಪರಿಚಯಸ್ಥ? ಎಂದರೆ ನಮ್ಮ ಕುಲಸ್ಥರು ಮತ್ತು ನಮ್ಮ ಊರಿನ ಅವರ ಸಂಬಂಧಿಕರ ಮನೆಗೆ ಬರುವುದರಿಂದ ಪರಿಚಯವಾದರು. ಕ್ರಯದ ಮಾತು-ಕತೆ ಆಗುವಾಗ ಮತ್ತು ಕರಾರಿನ ನೋಂದಣಿ ಆಗುವಾಗ ಕುರಿ ಮಲ್ಲಪ್ಪ ಮತ್ತು ಎಂ. ಶಂಕರಪ್ಪ ಎನ್ನುವವರು ಇರಲೂ ಇಲ್ಲ ಮತ್ತು ವಾದಿಗೆ ಅವರ ಪರಿಚಯವೂ ಇಲ್ಲ ಎಂದರೆ ಸರಿಯಲ್ಲ. ಅವರಿಬ್ಬರೂ ಹಾಜರಿದ್ದಾಗ ಕ್ರಯದ ಕರಾರಿಗೆ ಅವರಿಬ್ಬರ ಸಾಕ್ಷಿ ಸಹಿಗಳನ್ನು ಮಾಡಿಸಲಿಲ್ಲವೇ? ಎಂದರೆ ಸಾಕ್ಷಿಯು ಇಬ್ಬರು ಸಾಕ್ಷಿ ಸಹಿಗಳನ್ನು ಮಾಡಿದ್ದರಿಂದ ವಾದಿಯು ಅವರಿಬ್ಬರ ಸಹಿಗಳು ಅಗತ್ಯವಿಲ್ಲವೆಂದು ಹೇಳಿದರು ಎನ್ನುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 10.01.2017 ರಂದು ನಾನು ರೂ. 5 ಲಕ್ಷ ಪಡೆದುಕೊಂಡು ವಾದಿಗೆ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸುಳ್ಳು , ರೂ. 1 ಲಕ್ಷ ಮಾತ್ರ ಪಡೆದಿದ್ದೇನೆ . ನೋಂದಣಿ ಕಚೇರಿಯಲ್ಲಿ ಪತ್ರ ಬರಹಗಾರ ಟಿ ಲಿಂಗಪ್ಪ ಕರಾರು ತಯಾರಿಸಿದ ನಂತರ ಅದನ್ನು ನನಗೆ ಓದಿ ಹೇಳಿದ್ದರು ಎಂದರೆ ಸರಿಯಲ್ಲ. ಸಬ್ ರಿಜಿಸ್ಟ್ರಾರ್ ಕೂಡಾ ನನಗೆ ಕರಾರನ್ನು ಓದಿ ಹೇಳಿ ಕ್ರಯದ ಮುಂಗಡ ಹಣ ಬಂದಿದೆಯೇ? ಎಂದು ಕೇಳಿ ನಾನು ಬಂದಿದೆ ಎಂದು ಹೇಳಿದ ನಂತರವೇ ನೋಂದಣಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ವಿದ್ಯಾವಂತನಾಗಿದ್ದು ಕರಾರಿನ ಪ್ರತಿ ಪುಟಕ್ಕೆ ಸಹಿ ಮಾಡುವ ಮುಂಚೆಯಾದರೂ ಕರಾರನ್ನು ಓದಲಿಲ್ಲವೇ? ಎಂದರೆ ಓದಲು

ಅವಕಾಶ ಕೊಡಲಿಲ್ಲ. ನಾನು ಸಂಪೂರ್ಣ ಸುಳ್ಳು ಹೇಳಿಕೆಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ. 5 ಲಕ್ಷ ಮುಂಗಡ ಪಡೆದು ವಾದಿ ಕರೆದ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ಒದಗಿಸಿಕೊಟ್ಟು ಕ್ರಯ ಪತ್ರ ನೋಂದಣೆ ಮಾಡಿಸಿ ಕೊಡುತ್ತೇನೆ ಎಂದು ಒಪ್ಪಿದ್ದೆ ಎಂದರೆ ಸರಿಯಲ್ಲ. ಕ್ರಯದ ಕರಾರಿನ ಪ್ರಕಾರ ಕ್ರಯ ಪತ್ರ ಮಾಡಿಸಿ ಕೊಡುವಂತೆ ವಾದಿಯು ಹಲವಾರು ಬಾರಿ ನನ್ನನ್ನು ಕರೆದಿದ್ದರು ಎಂದರೆ ಸರಿಯಲ್ಲ. ಆದ್ದರಿಂದಲೇ ವಾದಿಯು ನನಗೆ ನೋಟೀಸ್ ನೀಡಿದ್ದರು ಎಂದರೆ ನಾನು ರಿಪ್ಲೇ ನೀಡಿದ್ದೇನೆ. ನಾನು ರೂ. 1 ಲಕ್ಷ ಸಾಲ ಮಾತ್ರ ಪಡೆದಿದ್ದೆನೆಂದು ಸುಳ್ಳು ರಿಪ್ಲೇ ನೀಡಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯು ಕ್ರಯ ಪತ್ರ ನೋಂದಣೆ ಮಾಡಿಸಿಕೊಡುವಂತೆ ಕೋರಿ ದಾವೆ ಹಾಕಿದ್ದಾರೆ ಎಂದರೆ ನಾನು ಪಡೆದ ರೂ. 1 ಲಕ್ಷ ಸಾಲವನ್ನು ಶೇಕಡಾ 6ರ ಬಡ್ಡಿಯಂತೆ ತೀರಿಸಲು ಇವತ್ತಿಗೂ ಸಿದ್ಧನಿದ್ದೇನೆ. ನಾನು ಕ್ರಯದ ಕರಾರು ಪತ್ರ ಬರೆದುಕೊಟ್ಟು ರೂ. 1 ಲಕ್ಷ ಸಾಲ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರ ನೋಂದಣೆ ಮಾಡಿಸಿಕೊಡಲು ನಾನು ಬಾಧ್ಯಸ್ಥನೆಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಈಗ ಸುಮಾರು 50 ಲಕ್ಷ ಬೆಲೆ ಇರುತ್ತದೆ. ಆ ಬಗ್ಗೆ ನಾನು ಸಂಬಂಧಪಟ್ಟ ಇಲಾಖೆಯಿಂದ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ಮಾಡಿದ್ದೇನೆ. ಕರಾರು ಆಗುವ ದಿನಾಂಕದಂದು ದಾವಾ ಸ್ವತ್ತಿಗೆ ಎಕರೆಗೆ ರೂ. 92 ಸಾವಿರ ಬೆಲೆ ಇದೆ ಎಂದು ಸಬ್ ರಿಜಿಸ್ಟ್ರಾರ್ ಕಚೇರಿಯವರು ದೃಢೀಕರಣ ನೀಡಿದ್ದಾರೆ ಎಂದರೆ ಸಾಕ್ಷಿಯು ಸರ್ಕಾರ ನಿಗದಿಪಡಿಸಿದ ಬೆಲೆ ಮತ್ತು ಹೊರಗಡೆ ವ್ಯವಹಾರ ಮಾಡುವ ಬೆಲೆ ಬೇರೆ ಬೇರೆ ಇರುತ್ತವೆ ಎಂದು ಹೇಳುತ್ತಾರೆ. ನಾನು ಎಕರೆಗೆ ಸುಮಾರು 10 ಲಕ್ಷಕ್ಕಿಂತ ಹೆಚ್ಚು ಬೆಲೆ ಇರುವ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ಮಾಡಿಲ್ಲ, ಮುಂದೆ ಹಾಜರು ಮಾಡಬಲ್ಲೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.